

## ಮನದ ಭಾಷೆಯ 'ಚೆನ್ನುಡಿ'

'ನಾವಾಡುವ ನುಡಿಯೇ ಕನ್ನಡ ನುಡಿ' ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ 'ಚೆನ್ನುಡಿ' ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.

ಪ್ರತಿಯೊಂದು ಮನೆಯವ್ರಿಗೂ, ಉಳಿದ ಮೂವತ್ತೊಂಭತ್ತು ಮನೆಯಯವ್ರ ಬಗ್ಗೆ ಗೊತ್ತಿತ್ತು. ಯಾರ ಮನ್ಯಾಗ ಪಾವಣ್ಯಾರ ಬಂದಾರ, ಯಾಕ ಬಂದಾರ, ಬಂದಾವ್ರು ಯಾವಾಗ ಹೋಗ್ತಾರ, ಪಾವಣ್ಯಾರಿಗೆ ಹೋಗೂಮುಂದ ಯಾವ ಬಣ್ಣದ ಜಂಪರ್ ಪೀಸ್ ಕೊಟ್ಟಾರ, ಯಾರ ಮನ್ಯಾಗ ಸತ್ತಾರ, ಹಡದಾರ, ಯಾರ ಮನಿಗೆ ಕನ್ಯಾ ನೋಡಲಿಕ್ಕೆ ಬಂದಾರ, ವಾಟಾಗಟಿ ಯಾರ ಮನ್ಯಾಗ ನಡದದ, ಯಾರ ಮನ್ಯಾಗ ಸಾಖರಪುಡಾ ಅದ ಇತ್ಯಾದಿ... ಖುದ್ದು ಮನಿಯವರಿಗೆಷ್ಟು ಗೊತ್ತಿತ್ತೋ, ಅಷ್ಟs ಕೆಲವೊಂದು ಸಲ ಅದಕ್ಕಿಂತ ಹೆಚ್ಚು ಬಾಜೂಕಿನ ಮನ್ಯಾವ್ರಿಗೆ ವಿಷಯ ಗೊತ್ತಿರತಿತ್ತು. ಮುಂಜಾನೆ ಮನ್ಯಾಗ ಹಾಲು ಉಕ್ಕಿದ ಸುದ್ದಿ, ಸಂಜಿ ವ್ಯಾಳ್ಯಾಕ್ಕ ಓಣ್ಯಾಗಿನ ಎಲ್ಲಾರಿಗೂ ಗೊತ್ತ ಆಗಿರತಿತ್ತು.

ನನ್ನ ಬಾಲ್ಯ ಎಲ್ಲಾ ಅಲ್ಲೇ ಕಳಕೊಂಡೇನಿ ನಾ. ಅವ್ವಾ ತಾತಾಗ ಒಟ್ಟು ಐದು ಹೆಣ್ಣು, ಒಂದು ಗಂಡು. ನಮ್ಮಮ್ಮ ಹಿರೀ ಮಗಳು. ಆಕೀನ ಬೆನ್ನ ಮ್ಯಾಲಿ ಇದ್ದ ಚಿಗವ್ವದು ಮದವಿ ಆಗಿ, ಆಕಿ ಬೆಳಗಾಂವದಾಗ ಇರತಿದ್ಲು. ಅವ್ವಾ, ತಾತಾ ಇಬ್ಬರು ಚಿಗವ್ವ, ಒಬ್ಬ ಮಾಮಾ ಇಷ್ಟ ಮಂದಿ ಇರತಿದ್ರು ಆ ಎರಡು ಖೋಲಿ ಮನ್ಯಾಗ. ಅವ್ರ ಜೋಡಿ ನಾನೂ ಬಂದ ಸೇರಕೊಂಡೆ. ಆಮ್ಯಾಲೆ ಅಲ್ಲೇ ಸಾಲಿಗೂ ಹೊಂಟೆ.

ನಲವತ್ತು ವರ್ಷದ ಈ ಹಿಂದಿನ ಕಥಿ ನಮ್ಮವ್ವ ನನಗ ಭಾಳ ಸಲಾ ಹೇಳ್ಯಾಳ.

'ಪ್ರತೀ ವರ್ಷದಂಗ ಆ ವರ್ಷನೂ ನಿನ್ನನ್ನ ಘಾಲ್ಸಿಗೆ ಕರಕೊಂಡ ಹೋಗಿದ್ದೆ. ನೀ ಆವಾಗ ಆರೂವರೆ ವರ್ಷದಾವ ಇದ್ದಿ. ಅವ್ವಾನ ಭಾಳ ಹಚ್ಚಕೊಂಡ ಬಿಟ್ಟಿದ್ದಿ. ನಿಂದ ಒಂದು, ಎರಡು, ಮೂರು, ನಾಲ್ಕು ಎಲ್ಲಾದಕ್ಕೂ ಆಕೀನ ಬೇಕ ಅನತಿದ್ದಿ. ಮೊದಲನೇ ಮಗಳ ಮೊದಲ ಮಗಾ ಬ್ಯಾರೆ. ಹಿಂಗಾಗಿ ಎಲ್ಲಾರೂ ನಿನ್ನ ಭಯಂಕರ ಅಚ್ಚಾ ಮಾಡತಿದ್ರು. ಒಂದು ತಿಂಗ್ಳು ಇದ್ದು, ವಾಪಸ್ ಊರಿಗೆ ಹೋಗೂಮುಂದ ನೀ ಬರಾಂಗಿಲ್ಲ, ಇಲ್ಲೇ ಇರತೇನಿ ಅಂತ 'ಹ್ವಾ' ಅಂತ ಜೋರ ಧ್ವನಿ ತಗದ ಅಳಲಿಕ್ಕೆ ಚಾಲು ಮಾಡಿದಿ. ಅಲ್ಲಾ, ತವರುಮನಿ ಬಿಟ್ಟ ಹೊಂಟಾಕಿ ನಾ; ಅಳಬೇಕಾದಾಕಿ ನಾ. ನೀ ಅಳೂದು ನೋಡಿ ಅವ್ವಾನೂ ಅಳಲಿಕ್ಕೆ ಚಾಲೂ ಮಾಡಿದ್ಲು. ಆಕೀಗಿ ಮಗಳ ಹೊಂಟಾಳ ಅನ್ನೋಕಿಂತ ಮೊಮ್ಮಗ ಹೊಂಟಾನಲಾ ಅಂತ ಭಾಳ ದುಃಖ ಆಗಿತ್ತ ಅನಸ್ತದ. ಅದು ಗೊತ್ತಾಗಿ ನನಗೂ ಕಣ್ಣಾಗ ನೀರ ಬಂದುವು. ಎಷ್ಟ ಹೇಳಿದ್ರೂ ನೀ ಕೇಳಲಿಲ್ಲ, ಬಸ್ಸಿನ ವ್ಯಾಳ್ಯಾ ಬ್ಯಾರೆ ಆಗಲಿಕತ್ತಿತ್ತು. ಹಿಂಗಾಗಿ ಎರಡ ಬಿಗದ ನಿನ್ನ ದರಾ ದರಾ ಎಳಕೊಂಡ ಹೋಗಲಿಕ್ಕೆ ಶುರು ಮಾಡಿದೆ. ಕಡ್ತಾ ತಿಂದ ಕೂಡ್ಲೇ ನಿನ್ನ ಅಳು ಇನ್ನೂ ಹೆಚ್ಚಾತು. ಅದನ್ನ ನೋಡಿ ಅವ್ವಾ, 'ಹೋಗ್ಲಿ ಬಿಡs ಕೂಸಿನ್ನ ಯಾಕ ಹೊಡಿತಿದಿ ಪಾಪ. ಅದೇನ ಬಂಗಾರ ಕೇಳತದೋ, ಬೆಳ್ಳಿ ಕೇಳತದೋ? ಪಾಪ ಇಲ್ಲೇ ಇರತೀನಿ ಅಂತದ. ಇರ್ಲಿ ಬಿಡ ಇನ್ನೊಂದ ನಾಕ ದಿನಾ...' ಅಂತ ಅಂದ್ಲು. ಅಕಿ ಅಷ್ಟ ಅಂದಿದ್ದ ತಡಾ, ನೀ ಕೈ ಬಿಡಸ್ಗೊಂಡಾವನ ಸೀದಾ ಓಡಿ ಹೋಗಿ ಅಕಿ ಮಗ್ಗಲಾಗ ನಿಂತ ಬಿಟ್ಟಿ. ಮತ್ತ ಅಕಿನ ಕಡಿಂದ ನಿನ್ನ ಬಿಡಸ್ಗೊಂಡು ಬರೋತನಕ ಸಾಕಾಗಿ ಹೋತು. ಬೆಳಗಾ ಮುಂಜಾನೆ ಬಾಜೂಕಿನ ಮನಿಗೋಳಿಗೆ ಹೋಗಿ 'ನಾ ಬರ್ತೇನ್ರಿ' ಅಂತ ಹೇಳಿ ಬ್ಯಾರೆ ಬಂದಿದ್ರಿಂದ ನನ್ನ ಕಳಸ್ಲಿಕ್ಕೆ ಅಂತ ಓಣ್ಯಾಗಿನ ಮಂದಿನೂ ಕೂಡಿತ್ತು. ಎಲ್ಲಾರಿಗೂ ನಾನು ದೊಡ್ಡ ಖಳನಾಯಕಿ ಗತೆ ಕಾಣಿಸ್ತಿದ್ದೆ. ಕಸಾಯಿ ಖಾನಾಕ್ಕ ಕುರಿ ಎಳಕೊಂಡ ಹೋದಂಗ ನಾ ನಿನ್ನ ಎಳಕೊಂಡ ಹೊಂಟೇನೇನೋ ಅಂತ ಮಂದಿ ಅನಕೊಂಡಿತ್ತು. ಅದನ್ನ ಬಾಯಿ ಬಿಟ್ಟು ಹೇಳದಿದ್ರೂ ಅವ್ರ ಮುಖ ನೋಡಿದ್ರ ಗೊತ್ತಾಗತಿತ್ತು. ಗೊತ್ತಿಲ್ಲದ ಮಂದಿ ನೋಡಿದ್ರ ನಾ ಮಲತಾಯಿ, ನಮ್ಮವ್ವನ ನಿನ್ನ ಹಡದವ್ವ ಅನ್ನೂ ಹಂಗ ಮಾಡಲಿಕತ್ತಿದ್ದಿ ನೀ. ಅಂತೂ ಏನೋ ಮಾಡಿ ನಿನ್ನ ಕರಕೊಂಡು ಬಸ್ ಹತ್ತಿದೆ. ನಿನ್ನ ಕಳಸೂ ಮುಂದ ಅತ್ತಷ್ಟು ಅವ್ವಾ, ಬಹುಶಃ ನನ್ನ ಮದ್ವಿ ಮಾಡಿ ಗಂಡನ ಮನಿಗೆ ಕಳಸುವಾಗೂ ಅತ್ತಿರಲಿಲ್ಲ ಕಾಣತದ.

ಘಾಲ್ಸಿನಿಂದ ಗೋಕಾಕಿಗೆ ಬಂದು, ಅಲ್ಲಿ ಇನ್ನೊಂದು ಬಸ್ ಹತ್ತಬೇಕು. ಬಳ್ಳಾರಿ ತನಾ ಹೋಗಲಿಕ್ಕೆ ಇದ್ದದ್ದು 'ಸಂಕೇಶ್ವರಬಳ್ಳಾರಿ' ಬಸ್ಸು ಒಂದೇ. ಭಯಂಕರ ರಶ್ಶು. ಲಗೇಜು, ನಿನ್ನ ಎಲ್ಲಾ ಒಂದ ಕಡೆ ಕೂಡಿಸಿ, ಒಳಗ ಹತ್ತಿ ಸೀಟು ಹಿಡಿದು ಕೂಡೋ ಅಷ್ಟೊತ್ತಿಗೆ ಸಾಕಾಗಿ ಹೋತು. ನಿನಗೋ ಸೀಟ್ ಮ್ಯಾಲೆ ಹತ್ತಿ ನಿಲ್ಲೂ ಚಟಾ ಬ್ಯಾರೆ ಇತ್ತು. ಹಂಗ ಹತ್ತಿ ನಿಂತ್ರ ಬ್ಯಾರೆದವರು ಬಂದು ಸರಿಸಿ, ಎಲ್ಲಿ ಕುತ್ತ ಬಿಡ್ತಾರೆನೋ ಅಂತ ಸಂಕಟ ನನಗ. ಮುಂಜಾನೆ ಹತ್ತಕ್ಕ ಗೋಕಾಕ ಬಿಟ್ಟ ಬಸ್ಸು, ಬಳ್ಳಾರಿ ಮುಟ್ಟೋದು ಸಂಜಿ ಎಂಟಕ್ಕ. ಅಲ್ಲಿ ತನಕ ನಿಲ್ಲಲಿಕ್ಕೆ ಆಗೋದಿಲ್ಲ ನಿನಗ. ಸುಮ್ಮನ 'ಕುಕ್ಕರಬಡಿ' ಸೀಟ್ ಮ್ಯಾಲೆ ಅಂದ್ರ ಅದನ್ನೂ ಕೇಳತಿದ್ದಿಲ್ಲಾ ನೀ. ಪುಣ್ಯಾಕ್ಕ, ಅವತ್ತು ನೀ ಹಂಗೇನೂ ಮಾಡಲಿಲ್ಲ. ದೀಡ್ ಟಿಕೇಟ್ ತಗಸಿ, ನಿನಗ ಕಿಡಕಿ ಸೀಟು ಬಿಟ್ಟು, ಬಾಜೂಕ ನಾ ಕುತ್ತೆ.

ಮುಂಜಾನಿಂದ ರಗಡ ದಣಿಕಿ ಆಗಿತ್ತು, ಕಿಡಕ್ಯಾಗಿಂದ ಗಾಳಿ ಬ್ಯಾರೆ ಛಂದಂಗ ಬರಲಿಕತ್ತಿತ್ತು, ಹಿಂಗಾಗಿ ಕಣ್ಣು ತಾವಾಗೇ ಮುಚ್ಚಿದುವು. ಒಂದ ಅರ್ಧಾ ತಾಸ ಆಗಿರಬೇಕು ಬಹುಶಃ, ಆಮ್ಯಾಲೆ ಎಚ್ಚರ ಆತು. ಅಷ್ಟರಾಗ ನನಗೂ ಸಿಟ್ಟು ಇಳದಿತ್ತು, ನಿನ್ನ ಮುಂಜಾನೆ ಸುಳ್ಳೇ ಹೊಡೆದೆ ಅಂತ ಕಣ್ಣಾಗ ನೀರ ಬಂದುವು. ನೀ 'ಹಪ್' ಅಂತ ಮುಖ ಉಬ್ಬಿಸ್ಗೊಂಡು, ಶಟಕೊಂಡ ಕೂತಿದ್ದಿ. ನನಗ ಕೆಟ್ಟ ಅನಿಸಿ ನಿನ್ನ ರಮಸ್ಲಿಕ್ಕೆ ಚಾಲು ಮಾಡಿದೆ. ಊಹೂಂ, ಏನು ಮಾಡಿದ್ರೂ ನಿನ್ನ ಸಿಟ್ಟ ಕಡಿಮಿ ಆಗವಲ್ಲು. ಅವ್ವಾ ಕಟ್ಟಿಕೊಟ್ಟಿದ್ದ ರವಾ ಉಂಡಿ ಕೊಟ್ರೂ ಸಿಟ್ಟ ಇಳೀವಲ್ಲು ನಿಂದು. ಎಷ್ಟೋ ದಿನಾ ನೀ ಬರೀ ರವಾ ಉಂಡಿ ತಿಂದ, ಊಟಾ ಮಾಡಲಾರದ ಇದ್ದ ಬಿಡತಿದ್ದಿಅಷ್ಟ ಪ್ರೀತಿ ನಿನಗ ಅವ್ವಾ ಮಾಡಿದ್ದ ರವಾ ಉಂಡಿ ಮ್ಯಾಲೆ. ಆಕೀನೂ ಅಷ್ಟ ರುಚಿ ಮಾಡತಿದ್ಲು. ಅದರಾಗ ಕೊಬ್ಬರಿ, ತುಪ್ಪ, ಹಾಕಿರತಿದ್ಲು. ಬಾಯಾಗ ಇಟ್ರ ಬೆಣ್ಣೆ ಹಂಗ ಕರಗತಿದ್ವು. ಕುತ್ತ ಪೆಟ್ಟಿಗಿ ಐದಾರು ಉಂಡಿ ತಿನ್ನದ ಸಮಾಧಾನ ಆಗತಿರಲಿಲ್ಲ. ನಿನಗ ಸೇರತಾವ ಅಂತ ದೊಡ್ಡ ಸ್ಟೀಲಿನ ಡಬ್ಬಿ ತುಂಬ ಉಂಡಿ ಕಟ್ಟಿಕೊಟ್ಟಿದ್ಲು. ನೀ ಯಾವಾಗ ರವಾ ಉಂಡೀಗೂ ಜಗ್ಗಲಿಲ್ಲಾ,

